ಶ್ರೀ ಸಿ. ಬೈರೇಗೌಡ.—ಸಹಕಾರ ಸಂಘಗಳಲ್ಲಿ, ಹೆಗ್ಗಣಗಳು, ತಿಮಿಂಗಿಲಗಳು ಇವೆ. ಆದ್ದರಿಂದ ಸರ್ಕಾರದವರು ಕೊಟ್ಟ ಹಣ ಬಡಜನತೆಗೆ ಮುಟ್ಟಿಲ್ಲ. ಆದ್ದರಿಂದ ಈಗ ಕೊಟ್ಟಿರುವ ಹಣವನ್ನು ಪೂರ್ತಿ ರೈಟ್ ಆಫ್ ಮಾಡಿ ಸರಿಯಾದ ರೀತಿಯಲ್ಲಿ ಬಡಜನಗಳಿಗೆ ಹಣ ಸಿಕ್ಕುವ ಹಾಗೆ ಮಾಡುತ್ತೀರಾ ?

ಶ್ರೀ ಸಿ. ಎನ್. ಪಾಟೀಲ್.—ರೈಟ್ ಆಫ್ ಮಾಡುವ ಪ್ರಶ್ನೆ ಇದರಲ್ಲಿ ಬರುವುದಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಅರ್ಧಂಬರ್ಧ ಆಗಿರುವ ಮನೆಗಳನ್ನು ಮುಗಿಸುವುದು ಸಂಶಯ ಎಂದು ಹೇಳಿದಿರಿ. ಆದ್ದರಿಂದ ಸರ್ಕಾರದಿಂದ ನಮಗೆ ಸ್ಪಷ್ಟವಾದ ಉತ್ತರ ಬೇಕಾಗಿದೆ. ಈಗ ಅರ್ಧಂಬರ್ಧ ಆಗಿರುವ ಮನೆಗಳನ್ನು ಪೂರ್ತಿ ಮಾಡುತ್ತೀರಾ ಅಥವಾ ಅವುಗಳನ್ನು ಹಾಗೆಯೇ ಉಳಿಸುತ್ತೀರಾ ? ಈಗ ಹರಿಜನ ಕೇರಿಗಳಲ್ಲಿ ಏನು ಮನೆಗಳನ್ನು ಕಟ್ಟಿದ್ದಾರೆ ಅವುಗಳಲ್ಲಿ ಯಾರೂ ಹೋಗಿ ಇರುವುದಕ್ಕೆ ಸಾಧ್ಯವಿಲ್ಲ. ಅವುಗಳನ್ನು ಹರಾಜು ಮಾಡಿದರೂ ಯಾರೂ ಅವುಗಳನ್ನು ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಆ ಮನೆಗಳ ಬಗ್ಗೆ ಬಾಕಿ ನಿಂತಿರುವ ಕಂತುಗಳನ್ನು ವಸೂಲು ಮಾಡುವುದು ಕಷ್ಟವಾಗಿದೆ. ಆದ್ದರಿಂದ ಆ ಬಗ್ಗೆ ಸ್ಪಷ್ಟವಾದ ನಿರ್ಣಯವನ್ನು ತಾವು ತೆಗೆದುಕೊಳ್ಳುತ್ತೀರಾ ಹೇಗೆ ಎನ್ನುವುದನ್ನು ಹೇಳಬೇಕು.

ಶ್ರೀ ಸಿ. ಎನ್. ಪಾಟೀಲ್.—ಆ ಬಗ್ಗೆ ನಾವು ಸ್ಪಷ್ಟವಾದ ನಿರ್ಣಯವನ್ನು ತೆಗೆದುಕೊಂಡಿಲ್ಲ. ಅದನ್ನು ಯೋಚನೆ ಮಾಡುತ್ತೇವೆ.

FREE OF COST HOUSE SITES TO S.C. PEOPLE IN BELGAUM DISTRICT

232. SRI P. P. HEGRE (Chikodi).—

Will the Minister for Transport and Housing be pleased to state :—

(a) the total number of house sites distributed free of cost to the Scheduled Castes People in Belgaum District upto end of February 1973 (talukwise figures and in respect of Chikodi taluk, villagewise figures may kindly be given) ;

(b) whether all such sites have been given possession of to the respective persons ?

SRI D. K. NAIKAR (Minister for Law and Municipal Administration—on behalf of Sri K. H. Ranganath, Minister for Transport and Housing).—

(a) 2,078 (to end of February, 1973) ; 2,204 (so far).

(Details furnished vide Statement appended).

(b) Yes.

(SRI D. K. NAIKAR)

Statement showing the number of House sites distributed to the families of Scheduled Castes in Belgaum District, so far.

Sl. No.	Name of the Taluk		Number of sites distributed to the Scheduled Castes	
1.	Belgaum	...	77	
2.	Khanapur	...	176	
3	Hukeri	...	95	
4.	Bailhongal	...	249	
5.	Saundatti	...	111	
6.	Ramdurg	...	111	
7.	Gokak	...	212	
8.	Chikodi	...	420	*Village wise details are enclosed.
9.	Raibag	...	430	
10.	Athani	...	323	
	Total	...	2,204	

* Villagewise distribution of house sites to the Scheduled Cas e people in Chikodi Taluk.

Sl. No.	Village	Number of sites distributed to S.Cs. People
1.	Sadalga	10
2.	Karoshi	18
3.	Mugali	5
4.	Jainapur	2
5.	Hattarwat	2
6.	Torenhalli	5
7.	Hirekudi	15
8.	Galataga	33
9.	Shiradwad	17
10.	Soundalga	6
11.	Borgaon	6
12.	Shivgaon	8
13.	Khadaklat	34
14.	Adi	11
15.	Koganolli	146
16.	Pattankudi	7
17.	Bedkihal	30
18.	Chikodi	17
19.	Chikalwal	6
20.	Kodni	5
21.	Budihal	3
22.	Manjar	10
23.	Sidnal	3
24.	Kurli	2
25.	Manganur	2
26.	Majalatti	3
27.	Wadral	12
28.	Matiwade	2
		420

ಶ್ರೀ ಪಿ. ಪಿ. ಹೆಗಡೆ.—ಸ್ವಾಮಿ ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಬೆಳಗಾಂ ಜಿಲ್ಲೆಯಲ್ಲಿ 2,204 ಸೈಟುಗಳನ್ನು ಹುಚಿವ್ದೇವೆ. ಅವರಲ್ಲಿ ಚಿಕ್ಕೋಡಿ ತಾಲ್ಲೂಕಿನಲ್ಲಿ 520 ಸೈಟುಗಳನ್ನು ಹಂಚಿದ್ದೇವೆ ಎಂದು ಹೇಳಿದ್ದಾರೆ. ಈ ಸೈಟುಗಳನ್ನು ಲ್ಯಾಂಡ್‌ಲೆಸ್ ಜನಗಳಿಗೆ ಹೌಸ್‌ಲೆಸ್ ಜನಗಳಿಗೆ ಹಂಚಬೇಕು ಎಂದು ಸರ್ಕಾರದ ಆದೇಶ ಇವೆ. ಹಾಗಾದರೆ ಲ್ಯಾಂಡ್‌ಲೆಸ್ ಮತ್ತು ಹೌಸ್‌ಲೆಸ್ ಜನಗಳು ಯಾರು ಎಂಬುದನ್ನು ಕಂಡುಹಿಡಿದು ಅಂಥವರಿಗೆ ಹಂಚಬೇಕು ಎಂದು ಡಿಪ್ಯುಟಿ ಕಮೀಷನರಿಗೆ ಸರ್ಕಾರದವರು ಆದೇಶವನ್ನು ನೀಡಿದ್ದಾರೆಯೇ ?

† ಶ್ರೀ ಡಿ. ಕೆ. ನಾಯ್ಕರ್.—ಲ್ಯಾಂಡ್‌ಲೆಸ್ ಮತ್ತು ಹೌಸ್‌ಲೆಸ್ ಯಾರು ಎನ್ನುವುದರ ಬಗ್ಗೆ ಸರಿಯಾದ ತಿಳಿವಳಿಕೆಯನ್ನು ಡಿ. ಸಿ. ಯವರಿಗೆ ಕೊಟ್ಟಿದೆ. ಆದರ ಪ್ರಕಾರ ಅವರು ಆಜ್ಞೆಯನ್ನು ಜಾರಿ ಮಾಡಿದ್ದಾರೆ.

ಶ್ರೀ ಪಿ. ಪಿ. ಹೆಗಡೆ.—ದಯವಾಡಿ ಹೌಸ್‌ಲೆಸ್ ಮತ್ತು ಲ್ಯಾಂಡ್‌ಲೆಸ್ ಯಾರು ಎನ್ನುವುದಕ್ಕೆ ವಿವರಣೆ ಕೊಡಿ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರ ದೃಷ್ಟಿಯಲ್ಲಿ, ಯಾರು ಹೌಸ್‌ಲೆಸ್ ಮತ್ತು ಲ್ಯಾಂಡ್‌ಲೆಸ್ ಎಂದು ಇದೆಯೋ ಅದೇ ಸರ್ಕಾರದ ದೃಷ್ಟಿಯಲ್ಲಿದೆ.

ಶ್ರೀ ಪಿ. ಪಿ ಹೆಗಡೆ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಅನ್ಯಾಯವಾಗಲಿಕ್ಕೆ ಮೂಲ ಕಾರಣವಾಗಿದೆ, ಸರ್ಕಾರದವರು ಲ್ಯಾಂಡ್‌ಲೆಸ್ ಮತ್ತು ಹೌಸ್‌ಲೆಸ್ ಜನಗಳಿಗೆ ಸೈಟುಗಳನ್ನು ಕೊಡಬೇಕು ಎಂದು ಹೇಳಿವ್ದಾರೆ. ಹಿಂದೂಸ್ಥಾನದಲ್ಲಿ ಹೆಚ್ಚು ಬಡವಾದ ಪೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಯಾವ ಸೈಟ್ ಸಿಕ್ಕಿಲ್ಲ. ಅದಕ್ಕೆ ಕಾರಣವಾಗಿ ನನ್ನ ಹತ್ತಿರ ಕೆಲವಾರು ಜನ ಬಂದಿದ್ದಾರೆ. ಒಂದೊಂದು ಕುಟುಂಬದಲ್ಲಿ 5—10 ಗುಂಟೆ ಜಮೀನು ಇದ್ದರೂ ಅವರಿಗೆ ಸೈಟ್‌ನ್ನು ಕೊಟ್ಟಿಲ್ಲ. ಆದ್ದರಿಂದ ಸರ್ಕಾರದವರು ಲ್ಯಾಂಡ್‌ಲೆಸ್ ಯಾರು ಎನ್ನುವುದನ್ನು ಡಿಫೈನ್ ಮಾಡಬೇಕು. ಐದು ಎಕರೆ ಒಳಗಿದ್ದವರನ್ನು ಲ್ಯಾಂಡ್‌ಲೆಸ್ ಎಂದು ತಿಳಿಯಬೇಕು. ಈ ಪ್ರಕಾರವಾಗಿ ಡಿ.ಸಿ. ಯವರಿಗೆ ಆದೇಶ ಹೋಗಿಲ್ಲ. ಈ ಅನ್ಯಾಯವನ್ನು ಸರಿಪಡಿಸಬೇಕಾದರೆ, ತಾವು ಲ್ಯಾಂಡ್‌ಲೆಸ್ ಮತ್ತು ಹೌಸ್‌ಲೆಸ್ ಬಗ್ಗೆ ಡಿಫೈನ್ ಮಾಡಲೇಬೇಕು ? ಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರು ಕೆಲವರಿಗೆ ಸೈಟ್ ಸಿಕ್ಕಿಲ್ಲ ಎಂದು ಅಲೆಗೇಷನ್ ಮಾಡುತ್ತಿದ್ದಾರೆ. ಇಂಥಿಂಥ ಜನರಿಗೆ ಸೈಟ್ ಸಿಕ್ಕಿಲ್ಲ, ಇಂಥಿಂಥವರು ಲ್ಯಾಂಡ್‌ಲೆಸ್ ಎಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ.

ಶ್ರೀ ಪಿ. ಪಿ. ಹೆಗಡೆ.—10 ಗುಂಟೆ ಜಮೀನು ಇದ್ದವರು ಲ್ಯಾಂಡ್‌ಲೆಸ್ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಇದಕ್ಕೆ ಏನಾದರೂ ತತ್ವವನ್ನು ಹಾಕಿಕೊಳ್ಳಬೇಕು.

ಅಧ್ಯಕ್ಷರು.—ಅವರು ಹೇಳಿದ್ದನ್ನು ಮಾಡುತ್ತೀರಾ?

ಶ್ರೀ ಡಿ. ಕೆ. ನಾಯ್ಕರ್.—ದೃಷ್ಟಾಂತಗಳನ್ನು ತಂದುಕೊಟ್ಟರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

Sri D. B. KALMANKAR.—I want to know whether persons having small holdings of agricultural lands are debarred from getting house sites ?

Sri D. K. NAIKAR.—Yes.

Sri DODDATHIMMAIAH.—Is the Government aware that while alloting sites belonging to private people, in some cases, the officers at the lower level distributed the sites and the owners of such lands filed litigation suits, and if it is true what the government proposes to do in such cases ?

Sri D. K. NAIKAR—In the case of lands belonging to private persons, negotiations will be made and lands will be acquiredr.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಎಲೆಕ್ಷನ್ ಲಿವಲ್‌ನಲ್ಲಿ ಗೋಮಾಳ ಜಮೀನು ಇದ್ದಾಗ, ನಿವೇಶನ ಇಲ್ಲದಿರುವಂಥ, ಹರಿಜನ ಗಿರಿಜನ ಮತ್ತು ಬಡವರಿಗೆ ನಿವೇಶನ ಕೊಡಬೇಕು ಎಂದು ಇರುವಾಗ, ದರಖಾಸ್ತಿನಲ್ಲಿದ್ದಂಥ ಜಮೀನನ್ನು ತಹಸೀಲ್ದಾರ್ ಅವರು ಇವರಿಗೆ ಕೊಡುವುದಕ್ಕೆ ಅವಕಾಶ ಇದೆಯೇ?

ಅಧ್ಯಕ್ಷರು.—ತಾವು ಕೇಳಿದ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಖ್ಯಾಮಿ ನಾವು ಸರ್ಕಾರದಿಂದ ಇಲ್ಲಿ ಖಚಿತವಾದ ಉತ್ತರವನ್ನು ನಿರೀಕ್ಷಿಸುತ್ತಿದ್ದೇವೆ. ನಿವೇಶನಗಳನ್ನು ಲ್ಯಾಂಡ್‌ಲೆಸ್ ಪರ್ಸನ್ಸ್‌ಗೆ ಕೊಡುತ್ತೇವೆಂದು ಹೇಳಿದಿರಿ. ಐದು ಎಕರೆಗಿಂತ ಕಡಿಮೆ ಜಮೀನು ಇರುವವರು ಲ್ಯಾಂಡ್‌ಲೆಸ್ ಪರ್ಸನ್ಸ್ ಎಂದು ನಿವೇಶನಗಳನ್ನು ಮಂಜೂರು ಮಾಡುವಾಗ ಪರಿಗಣಿಸುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಅವನ್ನು ವಿಚಾರ ಮಾಡುತ್ತೇನೆ.

ಶ್ರೀ ಪಿ. ಪಿ. ಹೆಗಡೆ.—ಮಾನ್ಯ ಅಧ್ಯಕ್ಷರೇ, ನನ್ನ ಮೂಲಭೂತವಾದ ಪ್ರಶ್ನೆ ಪರಿಹಾರವಾಗಿಲ್ಲ. ಲ್ಯಾಂಡ್‌ಲೆಸ್ ಪರ್ಸನ್ಸ್ ಎಂದರೆ ಯಾರು ಎನ್ನುವುದೇ ಪರಿಹಾರವಾಗಿಲ್ಲ.

ಅಧ್ಯಕ್ಷರು.—ಲ್ಯಾಂಡ್‌ಲೆಸ್ ಪರ್ಸನ್ಸ್ ಯಾರು ಎಂದರೆ, ಲ್ಯಾಂಡ್ಸ್ ಇಲ್ಲದವರು.

PROCUREMENT OF RICE IN SOUTH KANARA DISTRICT

250. SRI B. V. KAKKILAYA (Bantwal).—

Will the Minister for Food and Forests be pleased to state.—

(a) the target set for procurement of rice in South Kanara District in 1974 ;

(b) the actual quantity of rice procured so far ;

(c) the price of rice in the open market in Mangalore, Udipi, Bantwal, Puttur, Karkal and Coondapur in the first week of every month beginning from August 1973 up to February, 1974 ;

(d) the price of rice in the open market during the same period at Mercara, Shimoga, Hassan, Chickmagalur, Mysore and Bangalore ;

(e) the prices per quintal of rice paid for the rice procured as levy in South Kanara, Shimoga, Coorg, Hassan, Chickmagalur, Mysore and Bangalore for the different varieties of rice ;

(f) the quantity of rice supplies to the South Kanara District by the Government since November 1973 ;

(g) the quantity of rice allowed to be bought outside the District and transported to South Kanara on permit by private wholesale dealers ;

(h) the steps, if any, taken by the Government to make good the deficit of foodgrains in South Kanara District and also to arrest rise in the prices of foodgrains ?

SRI K. H. PATIL (Minister for Food and Forests).—

(a) 16,000 tonnes of paddy.

(b) 10,117 tonnes of paddy.